# 11

# ಪೌಲನ – ಲಾಭ ಮತ್ತು ನಷ್ಟದ ಹೇಳಿಕೆ

## (ಫಿಲಿಪ್ಪಿಯವರಿಗೆ 3:4-11)

ಕಾರ್ಖಾನೆಗಳಲ್ಲಿ ನಡೆಯುವ ವ್ಯವಹಾರದ ಲಾಭ ನಷ್ಟಗಳ ಕುರಿತು ಅವರ ಮಾಸಿಕ ಮಾಧ್ಯಮಗಳಲ್ಲಿ: ಅವರು ಹಣವನ್ನು ಗಳಿಸಿರುವಿರೋ ಅಥವಾ ಗಳಿಸಿಲ್ಲವೋ ಎಂದು ತಿಳಿಸುತ್ತಾರೆ. ಬಹು ಪ್ರಾಮುಖ್ಯವಾದ ವಿಷಯಗಳಿಗೆ ಯೆಹೂದ್ಯ ರಬ್ಬಿಗಳು ಈ ರೀತಿಯಾದ ಹೋಲಿಕೆಯ ಹೇಳಿಕೆಗಳನ್ನು ನೀಡುತ್ತಿದ್ದರು. ಯೇಸು ಸಹ ಇದೆ ವಿಧಿವಾದ ಪದಗಳನ್ನು ಉಪಯೋಗಿಸಿರುವನು: "ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು?" (ಮತ್ತಾಯ 16:26ಎ). ನಮ್ಮ ಈ ಪಾಠದಲ್ಲಿ, ಪೌಲನು ತನ್ನ ಲಾಭ ನಷ್ಟದ ಕುರಿತು ವಿವರಣೆಯನ್ನು ನೀಡಿರುವನು:

> ನನಗೆ ಲಾಭಾವಾಗಿದ್ದಂಥವುಗಳನ್ನು ಕ್ರಿಸ್ತನ ನಿಮಿತ್ತ ನಷ್ಟವೆಂದೆಣಿಸಿದ್ದೇನೆ. ಇಷ್ಟೇ ಅಲ್ಲದೆ, ನನ್ನ ಕರ್ತನಾದ ಕ್ರಿಸ್ತ ಯೇಸುವನ್ನರಿಯುವದೇ ಅತಿಶ್ರೇಷ್ಠವಾದದ್ದೆಂದು ತಿಳಿದು ನಾನು ಎಲ್ಲವನ್ನು ನಷ್ಟವೆಂದೆಣಿಸುತ್ತೇನೆ. ಆತನ ನಿಮಿತ್ತ ನಾನು ಎಲ್ಲವನ್ನೂ ಕಳಕೊಂಡು ಅದನ್ನು ಕಸವೆಂದೆಣಿಸುತ್ತೇನೆ ... (ವಚನಗಳು 7, 8).

ಅನುವಾದದಲ್ಲಿ "ನನಗೆ *ಲಾಭ*ವಾದಂತವುಗಳನ್ನು ಈಗ ಕ್ರಿಸ್ತನಿಗೋಸ್ಕರವಾಗಿ *ನಷ್ಟ*ವೆಂದೆಣಿಸುತ್ತೇನೆ" (ವಚನ 7; ಒತ್ತಿ ಹೇಳಿದ್ದು ನನ್ನದು).

ಈ ಪಾಠಗಳಲ್ಲಿ ಪೌಲನಿಗೆ, ಯಾವುದು ಲಾಭ ಮತ್ತು ನಷ್ಟವಾಗಿತ್ತು ಎಂದು ನೋಡುತ್ತೇವೆ. ಅದರಿಂದ ನಾವು ಪ್ರತಿಯೊಬ್ಬರು, "ನನಗೆ ಪ್ರಾಮುಖ್ಯವಾದದ್ದು ಏನು?" ಎಂಬ ಸವಾಲನ್ನು ಕೇಳಿಕೊಳ್ಳುತ್ತೇವೆ.

### ಆತ್ಮೀಕ ಸ್ವಾಸ್ಥ್ಯದಲ್ಲಿ ಒಬ್ಬನು ಅವಲಂಭಿಸುವದು = ನಷ್ಟ (3:4, 5ಎ, 7)

3ನೇ ಅಧ್ಯಾಯದ ಮೊದಲ ಭಾಗದಲ್ಲಿ, ಪೌಲನು ಯೂದಾಯ ಕ್ರೈಸ್ತರ ಕುರಿತು ತೀಕ್ಷ್ಣವಾಗಿ ಮಾತನಾಡಿರುವನು, ಕ್ರೈಸ್ತರಾದ ಯೆಹೂದ್ಯರು ಧರ್ಮಶಾಸ್ತ್ರದ ನಿಯಮಾವಳಿಗಳನ್ನು ಆಚರಿಸಿ ಮತ್ತು ಸುನ್ನತಿಯನ್ನು ಮಾಡಿಸಿಕೊಳ್ಳಬೇಕೆಂದು ಅನ್ಯರಿಗೆ ಸೂಚಿಸುತ್ತಿದ್ದರು. ಪೌಲನು ಈ ಸುಳ್ಳು ಪ್ರವಾದಿಗಳನ್ನು "ನಾಯಿಗಳು," "ದುಷ್ಟಕೆಲಸಗಾರರು," ಮತ್ತು "ಸುಳ್ಳಾದ ಸುನ್ನತಿಯವರು" ಎಂದು ಕರೆದನು (ವಚನ 2). "ನಾನು ಅದನ್ನು ಮಾಡುವದಾದರೇ ನೀನು ಯೆಹೂದ್ಯನಾಗದೇ? ಇರುವದಿರುವ ಅದರ ಬಗ್ಗೆ ನೀನು ಏನು ತಿಳಿದಿರುವಿ!" ಪೌಲನು ತಾನು ಏನನ್ನು ಮಾತನಾಡುತ್ತಿರುವನು ಅದರ ಕುರಿತು ತಿಳಿದವನಾಗಿ - ಅವನು ಒಂದು ಕಾಲದಲ್ಲಿ, ಯೆಹೂದ್ಯನಾಗಿದ್ದದ್ದರಿಂದ ಧರ್ಮಶಾಸ್ತ್ರವನ್ನು ತಪ್ಪದೇ ಪೌಲನೆ ಮಾಡುವವನಾಗಿದ್ದನು.

ಶಾರೀರಿಕವಾಗಿ ಭರವಸೆಯಿಡದೇ ಇರುವಂತದ್ದೆ ನಿಜವಾದ ಸುನ್ನತಿ [ಕ್ರೈಸ್ತರು], ... ಎಂದು ಪೌಲನು ತಿಳಿಸಿ (ವಚನ 3), "ನಾನಾದರೋ ಶರೀರ ಸಂಬಂಧವಾದವುಗಳಲ್ಲಿ ಯೂ ಭರವಸವಿಟ್ಟರೂ ಇಡಬಹುದು. ಬೇರೆ ಯಾವನಾದರೂ ಶರೀರ ಸಂಬಂಧವಾದವುಗಳಲ್ಲಿ ಭರವಸವಿಡಬಹುದೆಂದು ಯೋಚಿಸುವದಾದರೆ ನಾನು ಅವನಿಗಿಂತಲೂ ಹೆಚ್ಚಾಗಿ ಹಾಗೆ ಯೋಚಿಸಬಹುದು [ಯೆಹೂದ್ಯ ಬೋಧಕರು ಮಾಡುತ್ತಿದ್ದಂತೆ]" (ವಚನ 4). ಧರ್ಮಶಾಸ್ತ್ರದ ಪಾಲಕರಿಗೂ ಮತ್ತು ಅವನಿಗೂ ನಡುವೆಯಿದ್ದ ಹೋಲಿಕೆಯನ್ನು ತೋರಿಸಿದನು. "ಮುಂದಿನ

ವಚನದಲ್ಲಿ ಅವನು ಮಾಡಿದ ಪ್ರಮುಖ ವೈಯಕ್ತಿಕ ಅರಿಕೆಯು, ಪ್ರಾಚೀನ ಅವಶೇಷಗಳ ಮೃತ್ಯಪಾತ್ರದಂತಿತ್ತು."[1]

**ಹಳೆಯ ಯಥಾವೃಷ್ಟಿ**

ಮೊದಲನೆಯದಾಗಿ ಯೆಹೂದ್ಯ ಪೌಲನಂತೆ ಮಾತನಾಡಿದನು "ತನ್ನ ಬೆರಳಿನಲ್ಲಿ ಎಣಿಸುವಂತೆ ತನ್ನ ಯೋಗ್ಯತೆಗಳ ಕುರಿತಾಗಿ ಸ್ಪಷ್ಟವಾಗಿಯೂ ಮತ್ತು ಕ್ರಮವಾಗಿಯೂ ತಿಳಿಸಿದನು."[2] "*ಹುಟ್ಟಿದ ಎಂಟನೆಯ ದಿನದಲ್ಲಿ ಎಂಬ ವಿವರದಿಂದ ಪ್ರಾರಂಭಿಸಿದನು*" *(ವಚನ 5ಎ).* ಅವರ ಪರಿಣಾಮವಾಗಿ, "ನೀವು ಸುನ್ನತಿಯ ಬಗ್ಗೆ ಮಾತನಾಡುವವಾದರೆ? ನೇಮನಿಷ್ಟೆಗಳ ಪ್ರಕಾರ ಎಂಟನೆಯ ದಿನದಲ್ಲಿ ನನಗೆ ಸುನ್ನತಿಯಾಯಿತು!"

ಅಬ್ರಹಾಮನ ಸಂತಾನದವರಿಗೂ ಮತ್ತು ದೇವರಿಗೂ ನಡುವೆ ಉಂಟಾದ ಒಡಂಬಡಿಕೆಗೆ ಸುನ್ನತಿಯ ಸಂತಾನವಾಗಿತ್ತು. ಯೆಹೂದ್ಯ ಗಂಡು ಮಕ್ಕಳು ಎಂಟನೆಯ ದಿನದಲ್ಲಿ ಸುನ್ನತಿ ಮಾಡಿಸಿಕೊಳ್ಳಬೇಕೆಂಬ ನಿಯಮವಿತ್ತು (ಆದಿಕಾಂಡ 17:12; ಯಾಜಕಕಾಂಡ 12:3; ನೋಡಿರಿ ಲೂಕ 1:59; 2:21). ಪೌಲನು ಯೂದಾಯ ಮತವನ್ನು ಸ್ವೀಕರಿಸಿದವನಾಗಿರದೆ (proselyte), ಯೆಹೂದ್ಯನಾಗಿ *ಜನಿಸಿದವನು* ಎಂದು ಹೇಳಿಕೆಯನ್ನು ನೀಡಿದನು.

*ನಂತರ ಅವನು "ನಾನು ಇಸ್ರಾಯೇಲ್ ಸಂತಾನದವನು" ಎಂದನು (ವಚನ 5ಬಿ).* ಯಾಕೋಬನು, ರಾತ್ರಿಯೆಲ್ಲಾ ದೇವದೂತನ ಸಂಗಡ ಹೋರಾಟಮಾಡಿದ ನಂತರ, "ಇಸ್ರಾಯೇಲ" ಎಂಬ ಬಿರುದನ್ನು ಹೊಂದಿದನು (ಆದಿಕಾಂಡ 32:28). ಅದು ಯೊಹೂದ್ಯರಿಗೆ "ಪವಿತ್ರನಾಮವಾಯಿತು," ದೇವರೊಂದಿಗಿನ ಅವರ ಸಂಬಂಧಕ್ಕೆ ಅದು ಸೂಚನೆಯಾಗಿತ್ತು, ಆದುದರಿಂದ ಪೌಲನು ಆ ಜನಾಂಗಕ್ಕೆ ಸೇರಿದವನಾಗಿ ಹೆಚ್ಚಳಪಟ್ಟನು.

ಅವನು ಹನ್ನೆರಡು ಕುಲದಲ್ಲಿ, ಯಾವ ಕುಲಕ್ಕೆ ಸಂಬಂಧ ಪಟ್ಟವನು ಎಂದು ತಿಳಿಸಿದನು. ಪೌಲನ ದಿವಸಗಳಲ್ಲಿ, ಅನೇಕರು ತಮ್ಮ ಕುಲಗಳನ್ನು ಅರಿತಿರಲಿಲ್ಲ. *ಆದರೆ ಪೌಲನು ತಾನು "ಬೆನ್ಯಾಮೀನನ" ಕುಲದವನು ಎಂದು ಅರಿತಿದ್ದನು (ವಚನ 5ಸಿ).* ಬೆನ್ಯಾಮೀನನ ಕುಲವು ದೊಡ್ಡ ಕುಲವಾಗಿರಲಿಲ್ಲ (ನೋಡಿರಿ ಕೀರ್ತನೆ 68:27; NIVಯಲ್ಲಿ "ಬೆನ್ಯಾಮೀನನ ಚಿಕ್ಕ ಕುಲ" ಎಂಬುದಾಗಿದೆ) ಆದರೆ ಯೆಹೂದ್ಯರ ಚರಿತ್ರೆಯಲ್ಲಿ ಗಮನಾರ್ಹವಾದ ಕುಲವಾಗಿತ್ತು. ಯೆಹೂದ್ಯರ ಮೊದಲನೆಯ ಅರಸನು, ಬೆನ್ಯಾಮೀನನ ಕುಲದವನಾಗಿದ್ದನು (1 ಸಮುವೇಲ 9:1, 2, 21; 10:1; 20-25). ಇಸ್ರಾಯೇಲ್ ರಾಜ್ಯವು ಇಬ್ಬಾಗವಾದಾಗ, ಬೆನ್ಯಾಮೀನನ ಕುಲವು, ದಾವೀದನಿಗೆ ನಂಬಿಗಸ್ತವಾಗಿತ್ತು (1 ಅರಸು 12:21).[3]

*"ಇಬ್ರಿಯರಿಂದ ಹುಟ್ಟಿದ ಇಬ್ರಿಯನು" ಎಂದು ಸಂಕ್ಷೇಪವಾಗಿ ತಿಳಿಸಿದನು (ವಚನ 5ಡಿ).* ಈ ಹೇಳಿಕೆಯಲ್ಲಿ, ಪೌಲನ ಅನೇಕ ಸಂಗತಿಗಳು ಅಡಕವಾಗಿವೆ. ಅವನ ತಂದೆ ತಾಯಿಗಳು ಇಬ್ರಿಯರಾಗಿದ್ದರು - ಅದಕ್ಕಿಂತಲೂ ಹೆಚ್ಚಾದ ವಿಷಯವು ಅದರಲ್ಲಿ ಅಡಕವಾಗಿದೆ. ಉದಾಹರಣೆಗೆ, ಅವನ ಮನೆಯಲ್ಲಿ ಇಬ್ರಿಯ ಭಾಷೆಯನ್ನು ಮಾತನಾಡುತ್ತಿದ್ದರು. ಅದು ಯೆಹೂದ್ಯರ ಪುರಾತನ ಭಾಷೆಯಾಗಿತ್ತು ಎಂದು ಗ್ರಂಥಗಳಲ್ಲಿ ತಿಳಿದುಬರುತ್ತದೆ (ಯೋಹಾನ 19:13, 17, 20). ಪೌಲನು ಇಬ್ರಿಯ ಭಾಷೆಯನ್ನು ಕುರಿತು ಮಾತನಾಡುತ್ತಿದ್ದನು (ನೋಡಿರಿ ಅಪೊಸ್ತಲರ ಕೃತ್ಯಗಳು 21:40; 22:2; "ಇಬ್ರಿಯ ಭಾಷೆಯ ಮೂಲವಾದ ಅರಾಮ್ಯ ಭಾಷೆಯನ್ನು ಮಾತನಾಡುತ್ತಿದ್ದರು"[4]). ಹೇಗೂ, ಪೌಲನ ಮಾತು ಮುಂದುವರಿಯುತ್ತದೆ: ಅವನ ಮನೆಯು ಯೆರೂಸಲೇಮಿನಿಂದ ದೂರವಾಗಿದ್ದರೂ, ಯೆಹೂದ್ಯರ ಸಂಪ್ರದಾಯಗಳನ್ನು ಮತ್ತು ಕಟ್ಟಳೆಗಳನ್ನು ಚಾಚುತಪ್ಪದೆ ಅನುಸರಿಸುತ್ತಿದ್ದರು (ಅಪೊಸ್ತಲರ ಕೃತ್ಯಗಳು 21:39; 22:3). ಪಾಲಿಸ್ತೇನನಿಂದ ಹೊರಗೆ ವಾಸಿಸುತ್ತಿದ್ದ ಯೆಹೂದ್ಯರು ಅನ್ಯರ ಸಂಪ್ರದಾಯ ಹಾಗು ಪದ್ಧತಿಗಳನ್ನು ಅನುಸರಿಸುತ್ತಿದ್ದರು, ಆದರೆ ಪೌಲನ ತಂದೆ ತಾಯಿಗಳು ಹೊರಕಾಗಿದ್ದರು.

"ಅವನು ಇಬ್ರಿಯನೇ ಆಗಿದ್ದನು" ಎಂಬ ವ್ಯಾಖ್ಯಾನವನ್ನು ಪೌಲನು ನೀಡಿರುವನು.

ಅಪೊಸ್ತಲರನು ಸಂಪ್ರದಾಯದಂತೆ ಪರಿಶುದ್ಧಾನಾಗಿದ್ದನು ("ಎಂಟನೆ ದಿನದಲ್ಲಿ ಸುನ್ನತಿಯಾಗಿತ್ತು"), ಶುದ್ಧ ಜನಾಂಗದವನಾಗಿದ್ದನು ("ಇಸ್ರಾಯೇಲ್ ಜನಾಂಗದವನು, ಬೆನ್ಯಾಮೀನನ ಕುಲದವನು"), ಶುದ್ಧ ಸಂಸ್ಕೃತಿಯವನು ("ಇಬ್ರಿಯರಲ್ಲಿ ಇಬ್ರಿಯನು").[5]

**ನೂತನವಾದ ದೃಷ್ಟಿಕೋನ**

ಪೌಲನ, ಯೆಹೂದ್ಯ ಜೀವನ ಚರಿತ್ರೆ, ಅವನಿಗೆ ಪ್ರಮುಖವಾಗಿತ್ತೆ? ವಚನ 7ರಲ್ಲಿ, ಅವನಿಗೆ "ಲಾಭವಾದ" ವಿಷಯಗಳನ್ನು ನೀಡಲಾಗಿದೆ. TEV ಹೇಳಿಕೆಯಂತೆ, ಅವನ ಪ್ರಾಚೀನ ಸಂಗತಿಗಳನ್ನು ಅವನ ಆತ್ಮೀಕ ವಿಷಯಗಳಿಗೆ "ಲಾಭ" ಎಂದು ತಿಳಿಸಿದನು. ಹೇಗೂ, ಪೌಲನು ತನ್ನ ಯೆಹೂದ್ಯ ಯಶಸ್ವಿಗಳಿಂದ ರಕ್ಷಣೆಯನ್ನು ಹೊಂದಿದನೋ? ಇಲ್ಲ, ಅವನು ಮುಂದುವರಿಸಿ, "*ಆದರೆ ನನಗೆ ಲಾಭವಾಗಿದಂಥವುಗಳನ್ನು ಕ್ರಿಸ್ತನ ನಿಮಿತ್ತ ನಷ್ಟ ವೆಂದೆಣಿಸುತ್ತೇನೆ."*

ಕೆಲವರು, ತಾವು ಸಂಪಾದನೆ ಮಾಡಿರುವ ಸಂಗತಿಗಳಿಂದ ರಕ್ಷಣೆಯನ್ನು ಹೊಂದುವೆವು ಎಂದು ತಿಳಿದಿರುತ್ತಾರೆ: "ಅವರ ತಂದೆ ತಾಯಿಗಳು, ಮತ್ತು ಮೂಲ ಪಿತೃಗಳು ಸಭೆಯ ಸದಸ್ಯರಾ ಗಿದ್ದರಿಂದ," ಅವರ ಒಳ್ಳೆಯ ಕಾರ್ಯಗಳು ಇವರ "ಲೆಕ್ಕಕ್ಕೆ" ಸೇರುತ್ತವೆ ಎಂದು ನೆನಸುತ್ತಾರೆ. ಕ್ರೈಸ್ತ ದೇಶದಲ್ಲಿ ಹುಟ್ಟಿರುವದರಿಂದ ತಾವು "ಕ್ರೈಸ್ತರಾಗಿರುವವರು" ಎಂದು ಅನೇಕರು ಹೇಳು ವದನ್ನು ನಾನು ಕೇಳಿದ್ದೇನೆ.

ನನ್ನ ಆತ್ಮೀಕವಾದ ಹಳೆಯ ಸಂಗತಿಗಳಿಗಾಗಿ ನಾನು ಕೃತಜ್ಞನಾಗಿರುವೆನು. ಟೆಕ್ಸಾಸ್‌ನ - ಜಾನ್ಸನ್ ಪಟ್ಟಣದಲ್ಲಿ ನನ್ನ ಅಜ್ಜನಾದ ವೈಟ್‌ಮೂರ್, ಮೂಲ ಪ್ರಸಂಗಿಯಾಗಿದ್ದರು. ನನ್ನ ಇನ್ನೊಬ್ಬ ಅಜ್ಜನಾದ, ಜಾನ್ ಡಾಸನ್ ಡಾಕಸ್, ಅರ್ಕಾನ್‌ಸನ್‌ನಲ್ಲಿ ಸುವಾರ್ತಾ ಪ್ರಸಂಗಿಗಳಾಗಿದ್ದರು. ಪರಿಶುದ್ಧ ಗ್ರಂಥಗಳನ್ನು ಪ್ರತಿನಿತ್ಯ ನನಗೆ ಬೋಧಿಸಿದ, "ನನ್ನ ... ತಂದೆ ತಾಯಿಗಳಿಗಾಗಿ ಕೃತಜ್ಞನಾಗಿರುವೆನು" (ನೋಡಿರಿ 2 ತಿಮೊಥೆ 3:15). ಇಂಥಾ ಒಂದು ಒಳ್ಳೆಯ ಸ್ವಾಸ್ಥ್ಯಯವು ನನಗೆ ರಕ್ಷಣೆಯನ್ನು ನೀಡಬಹುದೇ? ಇಲ. "... ಕರ್ತನಾದ ಕ್ರಿಸ್ತ ಯೇಸುವಿನ ಶಿಲುಬೆಯಲ್ಲಿ ಮಾತ್ರ ನಾನು ಹೆಚ್ಚಳಪಡುತ್ತೇನೆ" (ಗಲಾತ್ಯ 6:14ಎ)!

## ಒಬ್ಬನ ಯಶಸ್ವಿ ಕಾರ್ಯಗಳ ಮೇಲೆ ಅವಲಂಬನೆ = ನಷ್ಟ (3:5ಬಿ-7)

**ಒಂದು ಹಳೆಯ ದೃಷ್ಟಿ**

ಆತ್ಮೀಕ ಸ್ವಾಸ್ಥ್ಯದ ಕುರಿತು ಕೇಳಿಸಿಕೊಂಡ ನಂತರ, ಪೌಲನು ಕ್ರೈಸ್ತನಾಗುವ ಹಿಂದೆಯೇ ತನ್ನ ಆತ್ಮೀಕ ವಿಷಯಗಳನ್ನು ನಮೂದಿಸಿದ್ದನು, ವಿಷಯವು ಈ ರೀತಿಯಾಗಿ ಪ್ರಾರಂಭಗೊಳ್ಳುತ್ತದೆ: "*ನೇಮನಿಷ್ಠೆಗಳನ್ನು ನೋಡಿದರೆ, ನಾನು ಫರಿಸಾಯನು" (ವಚನ 5ಇ)*. ಪೌಲನು "ನಿಯಮ ಬದ್ಧವಾದ ಪಂಗಡಕ್ಕೆ ಸೇರಿದ್ದನು" ಅದು ಯೆಹೂದ್ಯರ ಧರ್ಮವಾ ಗಿತ್ತು (ಅಪೊಸ್ತಲರ ಕೃತ್ಯಗಳು 26:5). ಫರಿಸಾಯರಾದ ಗಮಲಿಯೇಲನೆಂಬ ಬೋಧಕನಲ್ಲಿ ಪೌಲನು ಕಲಿಯುತ್ತಿದ್ದನು (ನೋಡಿರಿ ಅಪೊಸ್ತಲರ ಕೃತ್ಯಗಳು 22:3; 5:34). "ಅವನು ಪೂರ್ವಜನರ ಸಂಪ್ರದಾಯಗಳನ್ನು ಆಚರಿಸುತ್ತಿದ್ದನು" (ಗಲಾತ್ಯ 1:14).

ಫರಿಸಾಯರ ಸ್ಥಾನವನ್ನು ಶ್ರೇಷ್ಠ ಎಂಬುದಾಗಿ, ಗ್ರಂಥಗಳಲ್ಲಿ ತಿಳಿಸಲಾಗಿರುವದರಿಂದ, ಫರಿಸಾಯನಾಗಿರುವಂಥದ್ದು ಹೆಚ್ಚಳದ ಸಂಗತಿಯಾಗಿರುತ್ತದೆ. ಹೇಗೂ, ಯೆಹೂದ್ಯರು, ಫರಿಸಾಯರನ್ನು ಹೆಚ್ಚಾಗಿ ಗೌರವಿಸುತ್ತಿದ್ದರು, ಅವರು ಉನ್ನತ ಪಂಥದವರಾಗಿದ್ದರು, ಆತ್ಮಗಳು ದೇವದೂತರ, ಮತ್ತು ಪುನರುತ್ಥಾನದ ಕುರಿತು, ಧರ್ಮಶಾಸ್ತ್ರದಲ್ಲಿ ತಿಳಿಸಿರುವದನ್ನು ಅರಿತಿದ್ದರು (ನೋಡಿರಿ ಅಪೊಸ್ತಲರ ಕೃತ್ಯಗಳು 23:8). ಅವರು ನೇಮನಿಷ್ಠೆಗಳನ್ನು ಕಠಿಣವಾಗಿ ಪಾಲಿಸುತ್ತಿದ್ದರು (ನೋಡಿರಿ ಮತ್ತಾಯ 23:23). ಪೌಲನು ಫರಿಸಾಯನಾಗಿದ್ದನು ಎಂದು

ಹೇಳಿಕೊಂಡಾಗ, ಅವನು "ಇಬ್ರಿಯರಲ್ಲಿ ಇಬ್ರಿಯನು ಎಂದು ದೃಢಪಡಿಸಿದ್ದನು."

ನಂತರ ಪೌಲನು, *"ಮತಾಸಕ್ತಿಯನ್ನು ನೋಡಿದರೆ ನಾನು ಕ್ರೈಸ್ತ ಸಭೆಯ ಹಿಂಸಕನು"* (*ವಚನ 6ಬಿ*). (ನೋಡಿರಿ ಅಪೊಸ್ತಲರಕೃತ್ಯಗಳು 8:1ಬಿ, 3; 9:1, 2.) ಅದರ ಕ್ರಿಯಾಪದ "ಹಿಂಸಿಸು" (*diokein*). "ಓಡುವಂತೆ ಮಾಡುವ ಬಲ ಹಿಂದಟ್ಟು ಅಥವಾ ಹಿಂಬಾಲಿಸು ಸೈನ್ಯದವರು ವೈರಿಗಳು ಹಿಂದಟ್ಟಿ ಅವರು ಇವರೊಂದಿಗೆ ಹೋರಾಟ ಮಾಡುವಂಥ ಪ್ರಚೋಧನೆ, ಬೇಟೆಗಾರನು ತನ್ನ ಬೇಟೆಯನ್ನು ಹಿಂದಟ್ಟಿ, ಅದನ್ನು ಓಡುವಂತೆ ಮಾಡುವುದು"[6] ಎಂಬ ಅರ್ಥವಾಗಿದೆ. ಪೌಲನು ಏಕೆ ತನ್ನನ್ನು ಫರಿಸಾಯನು ಎಂದು ಹೇಳಿದನು ಎಂಬ ವಿಷಯವು ಚಾರ್ಚಾಸ್ಪದವಾಗಿದೆ, ಇತರರನ್ನೂ ಹಿಂಸಿಸುವುದು ಒಂದು ಆತ್ಮೀಕ ಸಾಧನೆ ಎಂದು ಅವನು ಭಾವಿಸಿದ್ದನು. ಕ್ರೈಸ್ತರನ್ನು ಹಿಂಸಿಸಿದರಲ್ಲಿ ಅಪೊಸ್ತಲನು ಹೆಚ್ಚಳ ಪಡಲಿಲ್ಲ. ಇನ್ನೊಂದು ಕಡೆ ಅವನು ಬರೆದು, "ನಾನು ದೇವರ ಸಭೆಯನ್ನು ಹಿಂಸೆ ಮಾಡಿದ್ದರಿಂದ, ಅಪೊಸ್ತಲನೆಸಿಸಿಕೊಳ್ಳುವದಕ್ಕೆ ಯೋಗ್ಯನಲ್ಲ ಎಂದು ಹೇಳಿದನು" (1 ಕೊರಿಂಥ 15:9). ಅವನ ಹಿಂದಿನ ಜೀವಿತದ ವಿಷಯಗಳು ಅವನ ಮನಸ್ಸಿನಲ್ಲಿ ಆಳವಾದ ಪರಿಣಾಮವನ್ನು ಇಟ್ಟಿದ್ದವು (ನೋಡಿರಿ ಅಪೊಸ್ತಲರ ಕೃತ್ಯಗಳು 22:4, 5; 26:9-11; ಗಲಾತ್ಯ 1:13; 1 ತಿಮೊಥೆ 1:13).

ಪೌಲನು ಯೆಹೂದ್ಯನಾಗಿದ್ದಾಗ, ಮಾಡಿದ ಸಾಧನೆಗಳ ಪಟ್ಟಿಯನ್ನು ನೀಡಿದ್ದನು, ಮತಾಸಕ್ತಿಯು, ಯೆಹೂದ್ಯರಿಗೆ ಮಹತ್ತರವಾದ ಹೆಗ್ಗಳಿಕೆಯಾಗಿತ್ತು (ನೋಡಿರಿ ಅಪೊಸ್ತಲರ ಕೃತ್ಯಗಳು 22:3; ರೋಮಾಪುರಪುರ 10:2). ಹಳೇ ಒಡಂಬಡಿಕೆಯಲ್ಲಿ ಪಿನೆಹಾಸನು ಅವನ ಹೆಗ್ಗಳೆಕೆಗೆ ಪ್ರಸಿದ್ಧಿಯಾಗಿದ್ದನು (ನೋಡಿರಿ ಅರಣ್ಯಕಾಂಡ 25:11-13; KJV). ನಿನ್ನ ಆಲಯಾಭಿಮಾನವು ನನ್ನನ್ನು ಬೆಂಕಿಯಂತೆ ದಹಿಸಿದೆ ಎಂಬ ಮಾತನ್ನು ಮೆಸ್ಸೀಯನು, ಹೇಳಿ ದ್ದನು (ಕೀರ್ತನೆ 69:9; ಯೋಹಾನ 2:17). ಪೌಲನು, ಯೂದಾಯ ಸಮುದಾಯದವರಿಗೆ, ಕ್ರೈಸ್ತರು ಆಡ್ಡಿಯಾಗಿರುವರು ಎಂದು ತಿಳಿದು, ಆ ಅಪಾಯವನ್ನು ತೊಡೆದು ಹಾಕಲು ಪ್ರಯತ್ನಿಸಿದನು (ಅಪೊಸ್ತಲರ ಕೃತ್ಯಗಳು 26:9-11). ಇತರೆ ಯೆಹೂದ್ಯರು ಅವರ ಸಮೂಹದ ಕುರಿತು ಹೆಚ್ಚಳ ಪಟ್ಟರು, ಆದರೆ ಪೌಲನು, ಆ ಹೆಚ್ಚಳವನ್ನು *ಸಾಧಿಸಿ ತೋರಿಸಿದನು.*

ಪೌಲನು ತನ್ನ ಆತ್ಮೀಕ ಸಾಧನೆಗಳನ್ನು, *"ಧರ್ಮ ಶಾಸ್ತ್ರದಲ್ಲಿ ಹೇಳಿರುವ ನೀತಿಯನ್ನು ನೋಡಿದರೆ, ನಾನು ನಿರ್ದೋಷಿ ಎಂದು ಹೇಳುವ ಮೂಲಕ ಅಂತ್ಯಗೊಳಿಸಿದನು" (ವಚನ 6ಬಿ).* ಗ್ರೀಕ್ ಭಾಷೆಯ (*dikaiosune*) "ನೀತಿ"ಯನ್ನು "ಸರಿಯಾಗಿ ಇರುವ ಗುಣ"[7] ಮೋಶೆಯು ಬಯಸಿದ ಸುಗುಣವು ಪೌಲನಲ್ಲಿ ಇತ್ತು ಎಂದು ಅವನು ಸಾಬೀತು ಮಾಡಿದನು. ಪೌಲನು ತಾನು "ನಿರ್ದೋಷಿ" ಎಂದನು ಇಲ್ಲ "ಯೇಸುಕ್ರಿಸ್ತನೊಬ್ಬನೆ" ಧರ್ಮಶಾಸ್ತ್ರವನ್ನು ಪರಿಪೂರ್ಣವಾಗಿ ನೆರವೇರಿಸಿದವನು! ಅವನು "ನಿರ್ದೋಷಿ" ಎಂಬುದರಲ್ಲಿ ಯಾವ ಅರ್ಥವನ್ನು ಪೌಲನು ತಿಳಿಸಿರುವನು?

2:15ರ ಧ್ಯಾನದಲ್ಲಿ "ನಿರ್ದೋಷಿ" ಎಂಬ ಪದದ ಬಗ್ಗೆ ಚರ್ಚಿಸಿರುವೆವು ಅದನ್ನು ಮನುಷ್ಯರಿಗೆ ಹೋಲಿಸುವಾಗ, ಯಾರೂ ಸಹ "ನಿರ್ದೋಷಿಗಳಿರುವದಿಲ್ಲ," ಅಥವಾ ಪಾಪರಹಿತರು ಇರುವದಿಲ್ಲ ಪೌಲನು ತಾನು ಪರಿಪೂರ್ಣನು ಅಥಾವ ಪಾಪರಹಿತನು, ಎಂಬುದಾಗಿ ಖಂಡಿತವಾಗಿ ಹೇಳುತ್ತಿಲ್ಲ (ನೋಡಿರಿ 3:12; 1 ತಿಮೊಥೆ 1:15). "ನಿರ್ದೋಷಿ" ಎಂದರೆ ಅವನ ಮೇಲೆ ಯಾವುದೇ ದೋಷಾರೋಪಣೆ ಇಲ್ಲ ಎಂಬ ಅರ್ಥ. ಬಾಹಿರವಾಗಿ ಹೊಂದಬೇಕಿದ್ದ ಸುಗುಣಗಳನ್ನು ಪೌಲನು ಹೊಂದಿದ್ದನು - ಜನರು ಅದನ್ನು ನೋಡುವುದಕ್ಕೆ ಸಾಧ್ಯವಿತ್ತು. ಅವನು ಯೆಹೂದ್ಯರ ಯಾವುದೆ ನೀತಿ ನಿಯಮಗಳನ್ನು ಉಲ್ಲಂಘಿಸಿರಲಿಲ್ಲ ಎಂದು ಸಾಭೀತು ಪಡಿಸಿದ್ದನು. ಅವನು ಇನ್ನೊಂದು ಪದವನ್ನು ಬಳಸಬಹುದಿತ್ತು; "ನಾನು ಚಿಕ್ಕಂದಿನಿಂದಲೂ, ಅವೆಲ್ಲಕ್ಕೂ ಸರಿಯಾಗಿ ನಡಕೊಂಡು ಬಂದಿದ್ದೇನೆ" (ಲೂಕ 18:21).

ಪೌಲನು, ಯೆಹೂದ್ಯನಾಗಿ, ವಿಶೇಷ ಸಾಧಕನಾಗಿದ್ದನು. ಅವನು ಗಲಾತ್ಯದವ

ರೊಂದಿಗೆ, "ನನ್ನ ನಡತೆ ಎಂಥದ್ದೆಂದು ನೀವು ಕೇಳಿದ್ದೀರಷ್ಟೇ ... ನನ್ನ ಸಂಪ್ರದಾಯಗಳಲ್ಲಿ ಬಹು ಅಭಿಮಾನವುಳ್ಳವನಾಗಿ ನನ್ನ ಜನರೊಳಗೆ ಸಮಪ್ರಾಯದವರಾದ ಅನೇಕರಿಗಿಂತ ಯೆಹೂದ್ಯ ಮತಾಚಾರದಲ್ಲಿ ಆಸಕ್ತನಾಗಿದ್ದೆನು" (ಗಲಾತ್ಯ 1:13, 14ಎ). ಅವನ ನಾಯಕತ್ವವನ್ನು ಗೌರವಿಸಲಾಗಿತ್ತು ಎಂದು ಅವನ ಮಾತಿನಿಂದ ತಿಳಿಯುತ್ತೇವೆ (ನೋಡಿರಿ ಅಪೊಸ್ತಲರ ಕೃತ್ಯಗಳು 7:58; 8:1ಎ; 9:1, 2; 22:5; 26:10). *"Jewish Times"* ಎಂಬ ಸುದ್ದಿ ಪತ್ರಿಕೆಯನ್ನು ಅವರು ಮುದ್ರಿಸಿದ್ದರೆ, "ಅತಿ ಶ್ರದ್ಧೆಯುಳ್ಳ ವರ್ಷದ ವ್ಯಕ್ತಿ" ಎಂಬ ಮುಖಪುಟವನ್ನು ಅದು ಹೊಂದಿರುತ್ತಿತ್ತು.

**ಬದಲಾದ ದೃಷ್ಟಕೋನ**

ಯೆಹೂದ್ಯನಾಗಿ, ತನಗಿದ್ದ ಅರ್ಹತೆಗಳನ್ನು "ಲಾಭದ" ಸಾಧನೆ ಎಂದು ಪೌಲನು ಹೇಳ ಬಹುದಿತ್ತು. ಅದು ಅವನ ಆತ್ಮೀಕ ದಾಖಲೆಯಾಗಿರುತ್ತಿತ್ತು - ಆದರೆ ಅವನ ದೃಷ್ಟಿಕೋನವು ಬದಲಾಯಿತು: *"ಆದರೆ ನನಗೆ ಲಾಭವಾಗಿದ್ದಂಥವುಗಳನ್ನು ಕ್ರಿಸ್ತನ ನಿಮಿತ್ತ ನಷ್ಟವೆಂದೆಣಿಸಿದ್ದೇನೆ" (ವಚನ 7).* "ನೇಮ ನಿಷ್ಟೆಗಳನ್ನು ಅನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ" ಎಂದು ಪೌಲನು ಮನಗೊಂಡಿದ್ದನು (ರೋಮಾಪುರ 3:20ಎ; ಗಲಾತ್ಯ 5:4). ನೀತಿವಂತರೆಂಬ ನಿರ್ಣಯವನ್ನು ಹೊಂದುವದು ದೇವರ ಉಚಿತಾರ್ಥ ಕೃಪೆಯಿಂದಲೇ ಎಂದು ಪೌಲನು ತಿಳಿದಿದ್ದನು (ರೋಮಾಪುರ 3:24); "ನಂಬಿಕೆಯಿಂದಲೇ ನೀತಿನಿರ್ಣಯ" (ಗಲಾತ್ಯ 3:24); ಆದುದರಿಂದ ಅವನು: ಆತ್ಮೀಕ "ಲಾಭ" ಎಂದು ತಿಳಿದದ್ದನ್ನು "ನಷ್ಟ" ಎಂಬುದಾಗಿ ಮನವರಿಕೆ ಮಾಡಿಕೊಂಡನು.

ಸಾಧನೆಗಳಿಗೆ, ಬಹುಮಾನಗಳನ್ನು ನೀಡುವ ಪ್ರಂಪಂಚದಲ್ಲಿದ್ದೇವೆ, ಅರ್ಹತಾ ಪತ್ರಿಕೆಗಳು, ಪದಗಳು ಬಹುಮಾನಗಳು, ಟ್ರೋಫಿಗಳು, ಡಿಪ್ಲೋಮಗಳು, ಬಡ್ತಿಗಳು, ದೊರೆಯುತ್ತವೆ: ವೈಯಕ್ತಿಕ ಸಾಧನೆಗಳಿಗೆ ಮಾತ್ರ ಇವುಗಳು ಮೀಸಲು. ನಮ್ಮ ಸಾಧನೆಯ ಹೆಗ್ಗಳಿಕೆಯನ್ನು ಬಯಸಿ, ಮೆಚ್ಚುಗೆ ವ್ಯಕ್ತಪಡಿಸುತ್ತೇವೆ, ಧಾರ್ಮಿಕ ವಿಷಯಗಳಿಗೆ ಬರುವಾಗ, ನಮ್ಮ ವೈಯಕ್ತಿಕ ಸಾಧನೆಗಳು, ನಮ್ಮ ರಕ್ಷಣೆಯ ಅಥವಾ ರಕ್ಷಣೆ ಹೊಂದದೆ ಇರುವ ಪರಿಸ್ಥಿತಿಯನ್ನು ಸೂಚಿಸುತ್ತಿವೆ ಎಂದು ತಿಳಿಯುತ್ತೇವೆ. ರಕ್ಷಣೆಯು "ನಂಬಿಕೆಯ ಮೂಲಕವಾಗಿ ಹೊರತು," ಒಳ್ಳೆಯ "ಕ್ರಿಯೆಗಳಿಂದ" ಎಂದು ಕೆಲವರು ತಿಳಿಯುತ್ತಾರೆ. ಈ ಶೋಧನೆಗೆ ಕೆಲವರು ಒಳಗಾಗುತ್ತಾರೆ. ದೀಕ್ಷಾಸ್ನಾನದ ಕುರಿತು ಚರ್ಚಿಸುವಾಗ ಕೆಲವರು ಭಿನ್ನಾಭಿಪ್ರಾಯವನ್ನು ತೋರಿರವರು. "ನನ್ನ ಅಜ್ಜನಿಗೆ ರಕ್ಷಣೆಯಾಗಿರಲಿಲ್ಲ? ಯಾಕಂದರೆ ಅವರು ದೀಕ್ಷಾಸ್ನಾನ ಹೊಂದಿರಲಿಲ್ಲ. *ಆದರೆ ಅವನು ಉತ್ತಮವಾದ ಮನುಷ್ಯನಾಗಿದ್ದನು!*" ಅಂತಹ ವ್ಯಕ್ತಿಗಳು ಉತ್ತಮ *ಸಾಧನೆಯಿಂದ* ಅವರು ಪೂರ್ವಿಕರು ರಕ್ಷಣೆ ಹೊಂದ ಬಹುದೆಂದು ಸಲಹೆಯನ್ನು ನನಗೆ ನೀಡುತ್ತಿರುವರು. "ನಂಬಿಕೆಯಿಂದ ಮಾತ್ರ ರಕ್ಷಣೆ" ಎಂದು ಹೇಳುವವರು, ಅವರು ಬೋಧನೆಗಳಿಗೆ ತದ್ವಿರುದ್ಧವಾಗಿರುವರು.

ವೈಯಕ್ತಿಕ ಸಾಧನೆಗಳನ್ನು ಅವಲಂಭಿಸಿರುವವರನ್ನು ನಾನು ಎಚ್ಚರಿಸುತ್ತೇನೆ, ದೇವರಿಗಾಗಿ ಕಾರ್ಯಗಳನ್ನು ನಾವು ಮಾಡಬಾರದು ಎಂದು ಹೇಳುತ್ತಿರುವೆನೇ? ಇಲ್ಲ, ಆತ್ಮೀಕ ಸಾಧನೆಗಳು ಒಳ್ಳೆಯದೆ. ರಕ್ಷಣೆಗಾಗಿ, ನಮ್ಮ ಸಾಧನೆಗಳನ್ನು ಅವಲಂಭಿಸಬಾರದು. ನಾವು ಮಾಡುವಂಥ ಯಾವುದೇ ಕಾರ್ಯಗಳಿಂದ ರಕ್ಷಣೆ ಹೊಂದಲಾರೆವು. ಯೇಸು ಹೇಳಿದ್ದು, "... ನೀವು ನಿಮಗೆ, ಅಪ್ಪಣೆಯಾಗಿರುವದನ್ನೆಲ್ಲಾ ಮಾಡಿದ ಮೇಲೆ, ನಾವು ಆಳುಗಳು, ಪ್ರಯೋಜನವಿಲ್ಲದವರು, ಮಾಡಬೇಕಾದದ್ದನ್ನೇ ಮಾಡಿದ್ದೇವೆ ಅನ್ನಿರಿ" (ಲೂಕ 17:10). ವೈಯಕ್ತಿಕ ಸಾಧನೆಗಳಿಂದ ರಕ್ಷಣೆಯನ್ನು ಹೊಂದುವೆವು ಎಂದು ಹೇಳುವಂಥದ್ದು ಕ್ರಿಸ್ತನ ಮರಣವನ್ನೇ ನಿರಾಕರಿಸುವಂತೆ. ಒಳ್ಳೆಯದನ್ನು ಮಾಡುವದರಿಂದ ಒಬ್ಬನು ರಕ್ಷಣೆ ಹೊಂದುವುದಾದರೆ ಇಬ್ಬರೂ ಸಹ ಹೊಂದ ಬಹುದಲ್ಲವೇ, "ದೇವರು ಪಕ್ಷಪಾತಿಯಲ್ಲ" (ಅಪೊಸ್ತಲರ ಕೃತ್ಯಗಳು

10:34). ನೂರು ಜನರು ಹೊಂದ ಬಹುದಲ್ಲವೇ, ಎಲ್ಲಾ ಮನುಷ್ಯರು ಹೊಂದಬಹುದಲ್ಲವೇ ಇದರಿಂದ - ಯೇಸುಕ್ರಿಸ್ತನು ಶಿಲುಬೆಯ ಮೇಲೆ ಅನುಭವಿಸಿದ ಮರಣವು ವ್ಯರ್ಥವೇ. ಇದು ದೇವದೂಷಣೆಯ ಆಲೋಚನೆಯಲ್ಲವೇ!

ಯಜಮಾನನ ಸೇವೆಯಲ್ಲಿ ನೀನು ಮಾಡುವಂಥದ್ದನ್ನೆಲ್ಲಾ ಮಾಡಬಾರದು ಎಂದು ನಾನು ಹೇಳುತ್ತಿರುವದಿಲ್ಲ. ಪೌಲನು ಬರೆದು, "ಆದದರಿಂದ ನನ್ನ ಪ್ರಿಯ ಸಹೋದರರೇ, ಸ್ಥಿರ ಚಿತ್ತರಾಗಿಯೂ ನಿಶ್ಚಲರಾಗಿಯೂ ಇದ್ರಿ. ನೀವು ಕರ್ತನ ಸೇವೆಯಲ್ಲಿ ಪಡುವ ಪ್ರಯಾಸವು ನಿಷ್ಫಲವಾಗುವದಿಲ್ಲವೆಂದು ತಿಳಿದು ಕರ್ತನ ಕೆಲಸವನ್ನು ಯಾವಾಗಲೂ ಅತ್ಯಾಸಕ್ತಿಯಿಂದ ಮಾಡುವವರಾಗಿರಿ" (1 ಕೊರಿಂಥ 15:58). ನಿನ್ನ *ಸಾಧನೆಗಳ* ಸಾರಕ್ಕೆ ದೇವರನ್ನು ಸೇರಿಸಬೇಡ ಎಂದು ನಿನ್ನನ್ನು ಅಧೈರ್ಯಪಡಿಸುತ್ತೇನೆ ಕರುಣೆಯುಳ್ಳ ಮತ್ತು ಕೃಪಾಪೂರ್ಣನಾದ ಕರ್ತನನ್ನೇ ಅವಲಂಭಿಸಿರಿ!

## ಕ್ರಿಸ್ತನ ಹೊರತಾಗಿ ಇರುವ ಇತರೆ ಸಂಗತಿಗಳು = ನಷ್ಟ (3:7, 8)

ವಚನ 7ನ್ನು ಪುನಃ ನೋಡಿರಿ: "ನನಗೆ ಲಾಭವಾದಂಥವುಗಳನ್ನು, ಕ್ರಿಸ್ತನ ನಿಮಿತ್ತ ನಷ್ಟವೆಂದೆಣಿಸುತ್ತೇನೆ." "ಯಾವುದೇ ಸಂಗತಿಗಳಿರಬಹುದು" ಪೌಲನು ಹೊಂದಿದಂಥ ಹಾಗು ಅವನ ಹಳೆಯ ಜೀವಿತದ ಸಾಧನೆಗಳೇ ಆಗಿರಬಹುದು. "ಮಾನವ ಧರ್ಮದ ಸಾಧನೆಗಳ ಪರ್ವತದ ತುದಿಯನ್ನೆ ಕಟ್ಟಿದ ನಂತರ, ಅವೆಲ್ಲವುಗಳನ್ನು ಒಂದೇ ಮಾತಿನಲ್ಲಿ ಹೊಡೆದು ಹಾಕಿದನು":[8] "ಕ್ರಿಸ್ತನಿಗಾಗಿ ಅವುಗಳನ್ನು ನಷ್ಟವೆಂದು ಪರಿಗಣಿಸಿದನು."

"ನಷ್ಟವೆಂದೆಣಿಸಿದ್ದೇನೆ" ಎಂಬ ವ್ಯಾಖ್ಯಾನವು ಗ್ರೀಕ್ ಭಾಷೆಯಲ್ಲಿ ಭೂತಕಾಲದ ವರ್ಣನೆಯಲ್ಲಿದೆ. ಕಳೆದ *ಸಮಯದಲ್ಲಿ* ಜರುಗಿದ ಒಂದು ಘಟನೆ. ದಮಸ್ಕದ ದಾರಿಯಲ್ಲಿ ಯೇಸುವನ್ನೂ ಸಂಧಿಸಿದ ಮಹತ್ವದ ಘಟನೆಯಿಂದ ಉಂಟಾದ ಬದಲಾವಣೆಯ ವಿಷಯವು ಅವನ ಮನಸ್ಸಿನಲ್ಲಿ ಇತ್ತು (ಅಪೊಸ್ತಲರ ಕೃತ್ಯಗಳು 9:1-19; 22:4-16; 26:9-18). ಅಗತ್ಯವಾದ ಬೆಳಕು ಅವನನ್ನು ಕುರುಡನನ್ನಾಗಿ ಮಾಡಿ ಅವನ ಯೋಚನೆಯನ್ನು ಮಂಕು ಮಾಡಿತ್ತು. ಅವನ ಜೀವನ ಗೊಂದಲಕೊಳ್ಳಗಾಯಿತು! "ಕತ್ತಲು" ಅವನಿಗೆ ಬೆಳಕಾಯಿತು; "ಕೆಟ್ಟದ್ದೆಲ್ಲವು" ಒಳ್ಳೆಯದಾಯಿತು; "ಸುಳ್ಳುಗಳು" ಸತ್ಯವಾಯಿತು!

### ಕ್ರಿಸ್ತನನ್ನು ಹೊರತು ಪಡಿಸಿದ ಸಂಗತಿಗಳು

ಅವನ ಲಾಭ - ನಷ್ಟಗಳನ್ನು ತುಲನೆ ಮಾಡಿದ ನಂತರ, ಯೇಸುವನ್ನು ಸಂಧಿಸಿದ ವಿಷಯದಲ್ಲಿ ಯೇಸು ಅವನು ಉಳಿಯಲಿಲ್ಲ. ಅವನು, *"ನನ್ನ ಕರ್ತನಾದ ಕ್ರಿಸ್ತ ಯೇಸುವನ್ನರಿಯುವುದೇ ಅತಿಶ್ರೇಷ್ಠವಾದದ್ದೆಂದು ತಿಳಿದು ನಾನು ಎಲ್ಲವನ್ನು ನಷ್ಟವೆಂದೆಣಿಸುತ್ತೇನೆ" (ವಚನ 8ಎ).* ಈ ವಚನದಲ್ಲಿ, ಗ್ರೀಕ್ ಭಾಷೆಯಲ್ಲಿರುವ ವರ್ತಮಾನಕಾಲವನ್ನು ಪೌಲನು ಉಪಯೋಗಿಸಿದ್ದಾನೆ, ವರ್ತಮಾನಕಾಲದಲ್ಲಿ ಮುಂದುವರಿಸಬೇಕಾದ ಕ್ರಿಯೆಯನ್ನು ತಿಳಿಸಿದನು. ನಷ್ಟದ ಕುರಿತು ಅವನ ರಕ್ಷಣೆಯ ಸಮಯದಲ್ಲಿ ಹೇಳಿದ ಮಾತಾಗಿರುವದಿಲ್ಲ; ಅದು ಪ್ರೀತಿ ನಿತ್ಯದ ನಿರ್ಣಯವಾಗಿರುತ್ತದೆ. ಕ್ರಿಸ್ತನಿಗೆ ಹೋಲಿಸಿದರೆ, ಪೌಲನಿಗೆ ಯಾವ ವಿಷಯಗಳು ಪ್ರಾಮುಖ್ಯವಾಗಿರಲಿಲ್ಲ. ಅವನು ಎಲ್ಲವನ್ನು ತ್ಯಜಿಸಲು ಸಿದ್ಧನಿದ್ದನು. "ಕ್ರಿಸ್ತನನ್ನು ಅರಿಯುವುದೇ ಶ್ರೇಷ್ಠ ಎಂದು ತಿಳಿದನು."

ಪೌಲನು ಮುಂದುವರಿಸಿ, *"ಆತನ ನಿಮಿತ್ತ ನಾನು ಎಲ್ಲವನ್ನು ಕಳಕೊಳ್ಳುತ್ತೇನೆ" (ವಚನ 8ಬಿ).* ಯೆಹೂದ್ಯರ ಸಮೂಹದಲ್ಲಿ, ಅವನು ತನ್ನ ಸ್ಥಾನವನ್ನು ಕಳಕೊಂಡನು. ತನ್ನ ದೇಶದವರೊಂದಿಗಿದ್ದ ಅವನ ಯೋಗ್ಯತೆಯನ್ನು ಕಳಕೊಂಡನು. ಅವನ ಸ್ನೇಹಿತರು ತಿರಿಗಿಬಿದ್ದರು, ಅವನು ಅವನ ಕುಟುಂಬದವರನೇಕರಿಂದ ದೂರವಾದನು. ಯೆಹೂದ್ಯರ ಅತಿ ಪ್ರೀತಿಪಾತ್ರನಾದ ಪೌಲನು ಒಂದೇ ರಾತ್ರಿಯಲ್ಲಿ ದೇಶಕ್ಕೆ ಒಳಗಾದನು. ಅವನು

ತನ್ನ ಸುರಕ್ಷತವಾದ ಇರುವಿಕೆಯನ್ನು ನಿರಾಕರಿಸಿ. ಕೊನೆಯದಾಗಿ ತನ್ನ ಜೀವವನ್ನೇ ಕಳಕೊಳ್ಳುವದಕ್ಕಿದ್ದನು. ಕ್ರಿಸ್ತನಿಗಾಗಿ ಇವೆಲ್ಲವನ್ನು ಮಾಡುವದಕ್ಕೆ ಮುಂದಾದನು.

ಪೌಲನ ಮುಂದಿನ ಪದಗಳು, ಯೂದಾಯದವರನ್ನು ದಿಗ್ಭ್ರಮೆ ಉಂಟುಮಾಡಿತು. (ಆದಿಯಲ್ಲಿದ್ದ ಒದುಗರಿಗೂ ದಿಗ್ಭ್ರಮೆ ಉಂಟುಮಾಡಿತ್ತು.[9]) ಅವನ ಸಕಲ ಚರ್ಚೆಯಲ್ಲಿ, *"ಅವುಗಳನ್ನು ನಾನು ಕಸವೆಂದೆಣಿಸುತ್ತೇನೆ. ಇದರಲ್ಲಿ ನನ್ನ ಉದ್ದೇಶವೇನಂದರೆ ಕ್ರಿಸ್ತನನ್ನು ಸಂಪಾದಿಸುವುದೇ" (ವಚನ 8ಸಿ).* ಗ್ರೀಕ್ ಭಾಷೆಯಲ್ಲಿ (*skubala*) "ಕಸ" ಅನುವಾದಕ್ಕೆ ಕಷ್ಟವಾದ ಪದ. ನಾಯಿಗಳಿಗಾಗಿ ಎಸೆದ ಎಂಜಲು, ಕಸದ ರಾಶಿ, ಅಥವಾ ಮನುಷ್ಯರ ಹಾಗೂ ಪ್ರಾಣಿಗಳ ಬಹಿರ್ದೆಶೆ (ನೋಡಿರಿ KJV). ಇಂಗ್ಲಿಷ್ ಭಾಷೆಯ "ಕೊಳಕು" ಎಂಬ ಗ್ರೀಕ್ ಪದ ಆ ಪದವನ್ನು ಹೇಗೆ ಅನುವಾದ ಮಾಡಿದರು, ಅದು ನಿರಾಕರಣೆಯೆ!

ಪೌಲನು ತನ್ನ ಕಳೆದು ಹೋದ ಜೀವಿತವನ್ನು ನೆನಪಿಸಿದಾಗ (ಅಥವಾ ಅವನನ್ನು ಕ್ರಿಸ್ತನಿಂದ ಪ್ರತ್ಯೇಕಪಡಿಸುವ ವಿಷಯಗಳಿರಬಹುದು), ಅದನ್ನು ಕೇವಲ ವ್ಯರ್ಥವೆಂದು ತಿಳಿಯದೆ, ಅದು ಅವಲಂಭಿತ ಎಂಬುದಾಗಿಯೂ ತಿಳಿದನು. ಇನ್ನೊಂದು ಅರ್ಥದಲ್ಲಿ, ಅವರಲ್ಲಿ ಯಾವುದೇ ಲಾಭವಿಲ್ಲವೆಂದು ತಿಳಿಯದೆ; ಅದರಿಂದ ಬೇಸರಗೊಂಡವನಾಗಿ, ಅದನ್ನು ನಿರಾಕರಿಸಿದನು. ನಾನು ರೈತನ ಕುಟುಂಬದಲ್ಲಿ ಬೆಳೆದು ಬಂದದ್ದರಿಂದ, ಈ ಮುಂದಿನ ದೃಷ್ಟಾಂತವನ್ನು ತಿಳಿಸುವೆನು. ಒಬ್ಬಾಕೆ ಹುಡುಗಿಯು, ತನ್ನ ಸುಂದರವಾದ ಬೂಟುಗಳನ್ನು ತೋರಿಸುತ್ತಾ, ನಂತರ ಅವಳು ಧರಿಸಿಕೊಂಡು ಕೆಸರಿನಲ್ಲಿ, ನಡೆಯಲು ಹೇಳಲ್ಪಟ್ಟಾಗ, ಅದು ಹಸುವಿನ ಸಗಣಿಯಾಗಿತ್ತು. ಆಗ ಅವಳ ಪ್ರತಿಕ್ರಿಯೆಯನ್ನು ಊಹಿಸಬಹುದೇ? ಮನುಷ್ಯನು ಕ್ರಿಸ್ತನಿಂದ ತನ್ನ ದೃಷ್ಟಿಯನ್ನು ಬದಲಿಸುವುದಾದರೆ, ಇದೇ ಅನುಭವವನ್ನು ಅವನು ಹೊಂದುವನು ಎಂದು ಪೌಲನು ತಿಳಿಸಿದನು.

**ಕ್ರಿಸ್ತನು ಮಾತ್ರ**

ಯೇಸುವಿನ ಅನುಸರಣೆಯಲ್ಲಿ ಪೌಲನು ಬೇಸರಪಟ್ಟುಕೊಂಡನೇ? ಕಸವನ್ನು ಎಸೆದು ಪುನಃ ಅದನ್ನು ತನ್ನ ಮನೆಗೆ ತೆಗೆದುಕೊಳ್ಳಲು ಬಯಸಿದಂತೆ! ಪೌಲನು ಒಬ್ಬ ವರ್ತಕನಂತೆ, "ಅವನು ಅಮೂಲ್ಯವಾದ ಮುತ್ತುಗಳನ್ನು" "ನೋಡಿದವನಾಗಿ, ಅವನು ಹೋಗಿ, ಅವನಿಗಿದ್ದದ್ದೆಲ್ಲವನ್ನು ಮಾರಿ" ಆ ಮುತ್ತನ್ನು ಕೊಂಡುಕೊಂಡನು (ಮತ್ತಾಯ 13:45, 46). ಬೇಡವಾದದ್ದನು ಕಳಕೊಂಡು, ಅಮೂಲ್ಯವಾದ ನಿಧಿಯನ್ನು ಪಡೆಯಲು ಇಷ್ಟಪಡುವದಿಲ್ಲವೇ?

ಪೌಲನ ಈ ಮಾತುಗಳಿಂದ ನಾವು ಏನನ್ನು ಕಲಿಯಲು ಸಾಧ್ಯವಿದೆ? ಕ್ರಿಸ್ತನಿಗೂ ಮತ್ತು ನಿಮಗೂ ನಡುವೆ - ಏನಾದರು ಇದ್ದರೆ, ಅದರಿಂದ ಬಿಡುಗಡೆಯನ್ನು ಪಡೆದುಕೊಳ್ಳಿರಿ. ಯಾವುದೇ ಅಪಾರ್ಥವು ಉಂಟಾಗದಂತೆ, ಕರುಣೆ ಇಲ್ಲದ ಜೀವನ ಸಂಗಾತಿಯನ್ನು ತೊರೆಯಬೇಕು ಎಂದು ನಾನು ಹೇಳಿತ್ತಿರುವದಿಲ್ಲ. ಮದುವೆಯು ಜೀವಿತಕ್ಕೆ ಮೀಸಲು (ಮತ್ತಾಯ 19:1-9). ಅವಿಶ್ವಾಸಿಯೊಂದಿಗೆ ಜೀವಿಸುವುದು ಕಷ್ಟಕರ, ಅದು ನಂಬಿಕೆಯನ್ನು ಹಂಚಿಕೊಳ್ಳುವ ಅವಕಾಶವನ್ನು ನೀಡುತ್ತದೆ (ನೋಡಿರಿ 1 ಪೇತ್ರ 3:1, 2). ಇತರೆ ಕ್ಷೇತ್ರಗಳಲ್ಲಿ ಈ ನಿಯಮವು ಮೂಲ ಸತ್ಯವನ್ನು ಎತ್ತಿ ಹಿಡಿಯುತ್ತದೆ. ಒಂದು ವಿಷಯವು ನಿಮಗೆ ಸರಿಯಾಗಿ ಕಾಣಬಹುದು, ಆದರೆ ಅದು ನಿಮಗೂ ಮಾತ್ರ ದೇವರ ನಡುವೆ ಒಂದುವಾದದರೆ, ಅದನ್ನು ತೆಗೆದು ಹಾಕಬೇಕು. ಅದು ವ್ಯರ್ಥವೆ. ಅದು ನಿಮ್ಮನ್ನು ಕ್ರಿಸ್ತನ ಅನ್ಯೋನ್ಯತೆಯಿಂದ ದೂರಮಾಡುವುದಾದರೆ ಅದಕ್ಕಿಂತ ವ್ಯರ್ಥವಾದ ಬೇರೆ ಸಂಗತಿಗಳಿರುವದಿಲ್ಲ. ಅಂಥವುಗಳನ್ನು ನಿರಾಕರಿಸಿರಿ. ಮುಳುಗುತ್ತಿರುವ ಹಡಗನ್ನು ಉಳಿಸುವ ಸಲುವಾಗಿ, "ಒಬ್ಬನು ಅಮೂಲ್ಯವಾದ ಹಡಗಿನ ವಸ್ತುಗಳನ್ನು ನೀರಿನಲ್ಲಿ ಹಾಕಿದಂತೆ, ಇಲ್ಲದೆ ಹೋದರೆ, ಹಡಗು ಮುಳುಗಿ ಹೋಗುತ್ತದೆ."[10]

# ಕ್ರಿಸ್ತನಲ್ಲಿ ಅವಲಂಬನೆ = ಲಾಭವೇ (3:9-11)

ಪೌಲನ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಉಂಟಾದ "ನಷ್ಟದ" ಕುರಿತು ಮಗ್ನರಾಗಿದ್ದೆವು. ಈಗ ಅವನ "ಲಾಭದ" ವಿಷಯವನ್ನು ಗಮನಿಸೋಣ.

**ಕ್ರಿಸ್ತನನ್ನು ಅರಿಯುವುದು**

ವಚನ 8ರಲ್ಲಿ ಪೌಲನು, "ಕ್ರಿಸ್ತ ಯೇಸುವನ್ನರಿಯುವುದೇ ಅತಿಶ್ರೇಷ್ಠವಾದದ್ದೆಂದು ತಿಳಿದು ನಾನು ಎಲ್ಲವನ್ನು ನಷ್ಟವೆಂದೆಣಿಸುತ್ತೇನೆ" ಎಂದನು. ವಚನ 10ರಲ್ಲಿ ಯೇಸುವನ್ನರಿಯುವ ಕುರಿತು ಒತ್ತಿ ಹೇಳಲಾಗಿದೆ: "ಆತನನ್ನು ಆತನ ಪುನರುತ್ಥಾನದಲ್ಲಿರುವ ಶಕ್ತಿಯನ್ನು ಆತನ ಬಾಧೆಗಳಲ್ಲಿ ಪಾಲುಗಾರನಾಗಿರುವ ಪದವಿಯನ್ನು ತಿಳುಕೊಂಡು ಆತನ ಮರಣದ ವಿಷಯದಲ್ಲಿ ಸ್ವರೂಪನಾಗ ಬೇಕೆಂಬುದೇ ನನ್ನ ಕುತೂಹಲವಾಗಿದೆ."

"ಕ್ರಿಸ್ತನ್ನನ್ನು ಅರಿಯಬೇಕೆಂದು" ಪೌಲನು ಹೇಳಿರುವದರಲ್ಲಿ ಕ್ರಿಸ್ತನ ಕುರಿತಾಗಿ ಕಲಿಯಬೇಕೆಂದು ಹೇಳುತ್ತಿರುವದಿಲ್ಲ - ಅದು ಪ್ರಾಮುಖ್ಯವಾಗಿರಬಹುದು (ರೋಮಾಪುರ 10:17). "ಅರಿ" ಅಂದರೆ (*ginosko*) ಅದು ಪದದಲ್ಲಿರುವ ಸಂಬಂಧ ವ್ಯಕ್ತಿಯನ್ನು ಅರಿಯುವುದು: [ಹೊಸ ಒಡಂಬಡಿಕೆ] ಅಥವಾ ಒಂದು ತಿಳಿದ ಸಂಗತಿಯನ್ನು ಅರಿಯುವ ಕುರಿತಾಗಿದೆ."[11]

ಪ್ರೇರಿತ ವಾಕ್ಯವನ್ನು ಓದುವಾಗ ಆತನನ್ನು "ಅರಿಯಲು" ಆರಂಭಿಸುತ್ತೇವೆ (ಯೋಹಾನ 20:30, 31). ನಂತರ, ಮಾನಸಾಂತರ ಹೊಂದಿವರಾಗಿ "ಕ್ರಿಸ್ತನೊಂದಿಗೆ ದೀಕ್ಷಾಸ್ನಾನ *ಮಾಡಿಸಿ*ಕೊಳ್ಳುವವರಾಗಿರುತ್ತವೆ" (ಗಲಾತ್ಯ 3:27; ಒತ್ತಿ ಹೇಳಿದ್ದು ನನ್ನದು). ತರುವಾಯ ಅವನೊಂದಿಗೆ "ನಡೆಯುತ್ತೇವೆ" (ರೋಮಾಪುರ 6:4; ಕೊಲೆಸ್ಸೆ 2:6) ಮತ್ತು ಆತನೊಂದಿಗೆ "ಅನ್ಯೋನ್ಯತೆಯನ್ನು" ಹೊಂದುತ್ತೇವೆ (1 ಕೊರಿಂಥ 1:9; 1 ಯೋಹಾನ 5:20), ಆತನನ್ನು ಹೆಚ್ಚಾಗಿ "ಅರಿಯುತ್ತೇವೆ" ಆತನಿಗೆ ಹತ್ತಿರವಾಗಿ ಅನ್ಯೋನ್ಯತೆಯಲ್ಲಿ ಬೆಳೆಯುತ್ತೇವೆ. ವಿಲ್ಬರ್ ಫೀಲ್ಡ್ಸ್ ಇದನ್ನು ಅದ್ಭುತವಾದ "ತಿಳುವಳಿಕೆ" ವಿಸ್ತಾರವಾದ "ಉಪಯೋಗವುಳ್ಳ ಸಂತೋಷವುಳ್ಳ ತೃಪ್ತಿದಾಯಕವಾದ, ಪರಿಶುದ್ಧಾವಾದ ಸಹಾಯವುಳ್ಳ [ಮತ್ತು] ಬದಲಾಯಿಸುವ!"[12] ವಿಚಾರ ಎಂದು ತಿಳಿಸಿರುವರು. "ಅವನನ್ನು ವೈಯಕ್ತಿಕವಾದ ಪ್ರೀತಿಯಿಂದ ಅರಿತು, ಭರವಸವಿಡುವದು, ಆತನ ರಕ್ಷಣೆಯಲ್ಲಿರುವ ಲಾಭಕ್ಕೆ ಸಮರ್ಪಣೆಯಾಗಿರುತ್ತದೆ."[13]

ಈ ಜೀವಿತದಲ್ಲಿ ಯೇಸುವನ್ನು "ಪೂರ್ಣವಾಗಿ" "ಅರಿಯುವ" ಅಸಾಧ್ಯವಾಗಿದೆ. ಅದುದರಿಂದ ವಚನ 10 ಮತ್ತು 11ರ ವಚನದಲ್ಲಿರುವ ಪುನರುತ್ಥಾನದ ವಿಷಯದ ಕಡೆಗೆ ಪೌಲನು ಗಮನ ಸೆಳೆದಿರುವನು. ಮೊದಲ ಯೋಹಾನ 3:2ರಲ್ಲಿ, "... ಕ್ರಿಸ್ತನು ಪ್ರತ್ಯಕ್ಷನಾದರೆ, ... ನಾವು ಆತನ ಹಾಗೆ ಇರುವೆವು [ಅಂತ್ಯದಲ್ಲಿ]."

**ಕ್ರಿಸ್ತನಲ್ಲಿ ಇರುವವರಾಗಿ ಕಾಣಿಸಿಕೊಳ್ಳುವದು**

*ಪೌಲನು ಕ್ರಿಸ್ತನನನ್ನು ಅರಿಯುವುದು ಮಾತ್ರವಲ್ಲ "ಆತನಲ್ಲಿ ಇರುವವನಾಗಿ ಕಾಣಿಸಬೇಕೆಂದು" ಬಯಸಿದನು (ವಚನ 9ಎ)*. ಯೇಸುವನ್ನು ತನ್ನ "ಶಾಶ್ವತವಾದ ವಿಳಾಸವನ್ನಾಗಿ" ಮಾಡಿಕೊಂಡನು. "ಕ್ರಿಸ್ತನ ಸ್ವಭಾವಕ್ಕೂ, ಕೆಲಸಕ್ಕೂ, ಅನ್ಯೋನ್ಯತೆಗೂ, ಮತ್ತು ಆತನ ಸನ್ನಿಧಿಗೂ ತನ್ನನ್ನು ಪೂರ್ಣವಾಗಿ ತೊಡಗಿಸಿಕೊಂಡನು."[14]

ಇದನ್ನು ಪೌಲನು ತನ್ನ ಸ್ವ ಸಾಮರ್ಥ್ಯದಿಂದ ಸಾಧಿಸಿಕೊಂಡನೇ? ಇಲ್ಲ. ಅವನು ಮುಂದುವರಿಸಿ, *"... ಸ್ವನೀತಿಯನ್ನಾಶ್ರಯಿಸದೆ ಕ್ರಿಸ್ತನನ್ನು ನಂಬುವದರಿಂದ ದೊರಕುವಂಥ ನೀತಿಯನ್ನೇ ಹೊಂದಿ ಕ್ರಿಸ್ತನಲ್ಲಿರುವವನಾಗಿ ಕಾಣಿಸಿಕೊಳ್ಳುಬೇಕೆಂಬದೇ (ವಚನ 9ಬಿ).* "ನೀತಿ" ಎಂಬ ಪದವನ್ನು ಈ ವಚನದಲ್ಲಿ ಎರಡು ಸಾರಿ ನೋಡುತ್ತೇವೆ. "ದೇವರ ದೃಷ್ಟಿಯಲ್ಲಿ ಸರಿಯಾಗಿ ಕಾಣಬೇಕೆಂಬುದೇ."

"ಸ್ವನೀತಿ ಎಂಬ ಪದವು ಧರ್ಮಶಾಸ್ತ್ರದಿಂದ ಬಂದದ್ದಾಗಿದೆ," ಮೋಶೆಯ ಧರ್ಮಶಾಸ್ತ್ರದ

ಕುರಿತು ಅವನು ಮಾತನಾಡುತ್ತಿದ್ದನು. ಗಲಾತ್ಯ 2:16ಬಿಯಲ್ಲಿ, "ನೇಮನಿಷ್ಠೆಗಳಿಂದ ನೀತಿವಂತರಾಗದೇ, ಮತ್ತು ಸುನ್ನತಿಯಿಂದಲೂ ನೀತಿವಂತರಾಗುವದಿಲ್ಲ." ಇನ್ನೂ ವಿಸ್ತಾರವಾದ ವಿವರಣೆಯನ್ನು ನೀಡಬಹುದು. ನನ್ನದೇ ಆದ ನೀತಿ ನಿರ್ಣಯವನ್ನು ಹೊಂದಿರುವದಿಲ್ಲ: ಎಂಬ "ತತ್ವವನ್ನು ನಿಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಿರಿ."

ವಿಧೇಯತೆಯ ಪ್ರಾಮುಖ್ಯತೆಯನ್ನು ಸತ್ಯವೇದವು ಬೋಧಿಸುತ್ತದೆ (ನೋಡಿರಿ ಯೋಹಾನ 14:15; 1 ಯೋಹಾನ 5:2, 3). ಸರ್ವಶಕ್ತನ ಪ್ರತಿಯೊಂದು ಆಜ್ಞೆಯನ್ನು ನಾವು ಪಾಲಿಸಬೇಕು, ಚಿಕ್ಕದಾದ ಮತ್ತು ಪ್ರಾಮುಖ್ಯವಲ್ಲದ ಆಜ್ಞೆಗಳನ್ನು ಪಾಲಿಸಬೇಕು (ಮತ್ತಾಯ 5:19). ಇದನ್ನು ಹೃದಯಪೂರ್ವಕ ನಂಬಿ ಅದನ್ನೇ ಉಪದೇಶಿಸುತ್ತೇನೆ. ದೇವರ ಚಿತ್ತವನ್ನು ಪಾಲಿಸದೆ ಹೋದರೆ, ನಮಗೆ ರಕ್ಷಣೆಯು ದೊರೆಯುವದಿಲ್ಲ (ಮತ್ತಾಯ 7:21; ಇಬ್ರಿಯ 5:8, 9). ಅದೇ ಸಮಯದಲ್ಲಿ ಆಜ್ಞೆಗಳನ್ನು ಕಾಪಾಡುವಂತ ಕೆಲಸದಿಂದ ರಕ್ಷಣೆ ಎಂಬ ವಿಷಯದ ಅಪಾಯವನ್ನು ಒತ್ತಿ ಹೇಳುತ್ತೇನೆ. ನಮ್ಮದೇ ಆದ "ನೀತಿ"ಯ ಅಪಾಯದ ಕುರಿತು ಹೇಳುತ್ತೇನೆ, "ಸಾಧನೆಯಿಂದ ರಕ್ಷಣೆಯಲ್ಲ, ಯಜ್ಞದಿಂದ ರಕ್ಷಣೆ! ಯಶಸ್ವಿಯಿಂದಾಗಿರದೇ, ಯೇಸುವಿನಲ್ಲಿ ಇಟ್ಟಿರುವ ವಿದೇಯತೆಯ ನಂಬಿಕೆಯಿಂದಲೇ."[15]

ಪೌಲನ ಬೋಧನೆ ಏನೆಂದರೆ: "... ನನ್ನ ಸ್ವನೀತಿಯನ್ನಾಶ್ರಯಿಸಬಾರದು, ನಂಬಿಕೆಯಿಂದ, ದೊರೆಯುವ ದೇವರ ನೀತಿ, ಇದಕ್ಕೆ ಕ್ರಿಸ್ತನಲ್ಲಿ ಇಟ್ಟಿರುವ *ನಂಬಿಕೆಯೇ ಮೂಲವಾಗಿರುತ್ತದೆ*" (3:9; ಒತ್ತಿ ಹೇಳಿದ್ದು ನನ್ನದು). ಕ್ರಿಸ್ತನ ಕುರಿತ ಕ್ರಮಬದ್ಧವಾದ ತಿಳುವಳಿಕೆಯ ಪಾಠಗಳು "ನಂಬಿಕೆಯಿಲ್ಲ, ವೈಯಕ್ತಿಕವಾಗಿ ಆತನನ್ನು ನಂಬಿ, ನಮ್ಮನ್ನು ಕ್ರಿಸ್ತನಿಗೆ ಸಮರ್ಪಿಸುವುದೇ."[16] ಅದು ಜೀವಿಸುವ ನಂಬಿಕೆ ಕಾರ್ಯನಿರ್ವಹಿಸುವ ನಂಬಿಕೆ, ವಿಧೇಯ ನಂಬಿಕೆ (ನೋಡಿರಿ ಯಾಕೋಬ 2:26; ಗಲಾತ್ಯ 5:6; ಇಬ್ರಿಯ 11:8) - ಯಜಮಾನನ ಚಿತ್ತಕ್ಕೆ ಸಂಪೂರ್ಣವಾದ ಸಮರ್ಪಣೆಯಾದ ಭರವಸೆ, ವಿಧೇಯ ನಂಬಿಕೆಯಿಂದ (ಮುಳುಗಿಸುವ) ದೀಕ್ಷಾಸ್ನಾನಕ್ಕೆ ನಡಿಸುತ್ತದೆ ಮತ್ತು ಕ್ರಿಸ್ತನಿಗೆ ನಡಿಸುತ್ತದೆ (ಗಲಾತ್ಯ 3:26, 27). ಏನೇ ಆದರೂ ಯೇಸು ನಮಗಾಗಿ ಮಾಡಿರುವ ಕಾರ್ಯದಲ್ಲಿ ನಂಬಿಕೆಯು ಇರುತ್ತದೆ, ನಾವು ಮಾಡಿರುವಂಥ ಕಾರ್ಯಗಳಲ್ಲಿ ಇರುವದಿಲ್ಲ, ಸ್ವ ಹೆಚ್ಚಳಕ್ಕೆ ಅವಕಾಶ ನೀಡುವದಿಲ್ಲ.

"ನಂಬಿಕೆ" ಎಂಬ ಪದಕ್ಕೆ ಒಬ್ಬ ಮಿಶನರಿಯು ಆಂಗ್ಲ ಭಾಷೆಯ ಅನುವಾದವನ್ನು ಹುಡುಕುತ್ತಿದ್ದರು,[17] ಈ ಸಮಯದಲ್ಲಿ ಸಹಾಯಕ್ಕಾಗಿ ಒಬ್ಬ ಮನುಷ್ಯನು ಅವನ ಬಳಿಗೆ ಬಂದನು, "ನಾನು ನಿನ್ನ ಬಳಿಗೆ ಬಂದು *ನಿನಗೆ ಒರಗಿಕೊಳ್ಳಲೇ* ಎಂದು ಕೇಳಿದನು?" "ನಂಬಿಕೆ" ಎಂದರೆ ಕ್ರಿಸ್ತನ ಮೇಲೆ ಬಾರವಾಗಿ ಒರಗಿಕೊಳ್ಳುವುದು. ನಾವು ಆತನನ್ನು ಅರಿಯಲು, ಆತನಲ್ಲಿ ಕಾಣಿಸಿಕೊಳ್ಳಲು, "ಈ ಕಾರ್ಯವನ್ನೆ ಮಾಡಬೇಕು."

## ಮುಕ್ತಾಯ

ನಮ್ಮ ಪಾಠದ, ವಚನ 10 ಮತ್ತು 11ರಲ್ಲಿ ಕರ್ತನ ಕುರಿತಾಗಿ ಎಲ್ಲವನ್ನು *ಅರಿಯಬೇಕೆಂಬ* ವ್ಯಾಖ್ಯಾನವನ್ನು ನೀಡಿದನು, ಆತನ ಪುನರುತ್ಥಾನದ ಶಕ್ತಿಯೂ ಇದರಲ್ಲಿ ಅಡಕವಾಗಿದೆ, ಆತನ ಬಾಧೆಯ ಅನ್ಯೋನ್ಯತೆಯು ಇದರಲ್ಲಿ ಸೇರಿರುತ್ತದೆ (ವಚನ 10). ನಮ್ಮ ಮುಂದಿನ ಪಾಠದಲ್ಲಿ ಇದನ್ನು ಸವಿವರವಾಗಿ ನೋಡೋಣ.

ನಮಗೆ ಪ್ರಾಮುಖ್ಯವಾದದ್ದು ಯಾವುದು? ಯೇಸು ಮತ್ತು ಯೇಸು ಮಾತ್ರ ಪೌಲನಿಗೆ ಪ್ರಾಮುಖ್ಯವಾದದ್ದು ಎಂದು ಸಹಜವಾಗಿ ತಿಳಿಯುತ್ತೇವೆ: ಕರ್ತನ ಹೊರತಾಗಿ ಎಲ್ಲವು "ನಿಷ್ಟದೆ" ಎಂದು ಪೌಲನು ತಿಳಿದನು. ಯೇಸುವನ್ನರಿಯುವುದೇ "ಶ್ರೇಷ್ಠವಾದದೆಂದು" ತಿಳಿದನು. ಇದನ್ನು ಧ್ಯಾನಿಸಿದ ನಂತರವೂ, ನಿಮಗೂ ಮತ್ತು ಕರ್ತನಿಗು ನಡುವೆ ಯಾವುದಾದರು ಅಡ್ಡಿ ಇರುವುದಾದರೆ, ಅದನ್ನು "ತೆಗೆದು" ಹಾಕಿ ಕಸವೆಂದು ಎಣಿಸಿರಿ. ನಿಮ್ಮ ಜೀವತವನ್ನು ಆತನಿಗೆ

ಅರ್ಪಿಸುವದರ ಮೂಲಕ ಆತನನ್ನು ಸಂಪಾದಿಸಿಕೊಳ್ಳಿರಿ ಅದನ್ನು - ಈ ದಿನವೆ ಮಾಡಿ!

---

ಟಿಪ್ಪಣಿಗಳು

[1]P. Bonnard; quoted in Ralph P. Martin, *The Epistle of Paul to the Philippians,* rev. ed., Tyndale New Testament Commentaries, ed. R. V. G. Tasker (Grand Rapids, Mich.: Wm. B. Eerdmans Publishing Co., 1987), 144. [2]J. A. Bengel; quoted in Martin, 145. [3]Gerald F. Hawthorne, *Word Biblical Commentary,* vol. 43, *Philippians*, ed. David A. Hubbard and Glenn W. Barker (Waco, Tex.: Word Books, 1983), 132-33. [4]Pat Edwin Harrell, *The Letter of Paul to the Philippians*, The Living Word Commentary series, ed. Everett Ferguson (Austin, Tex.: R. B. Sweet Co., 1969), 117. [5]Ibid. [6]Hawthorne, 134. [7]W. E. Vine, *The Expanded Vine's Expository Dictionary of New Testament Words,* ed. John R. Kohlenberger III (Minneapolis: Bethany House Publishers, 1984), 970. [8]Avon Malone, *Press to the Prize* (Nashville: 20th Century Christian, 1991), 78. [9]Hawthorne, 139. [10]Ibid., 136.

[11]Vine, 628. [12]Wilbur Fields, *Philippians-Colossians-Philemon,* Bible Study Textbook Series (Joplin, Mo.: College Press. 1969), 78. [13]Martin, 151. [14]Fields, 79. [15]Malone, 79. [16]Hawthorne, 141. [17]This illustration was adapted from Alec Motyer, *The Message of Philippians: Jesus Our Joy*, The Bible Speaks Today series, ed. John R. W. Stott (Downers Grove, Ill.: Inter-Varsity Press, 1984), 159.